**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿಸಿ ನಂ. 424-2015**

| | | |
|---|---|---|
| ಹೆಸರು | ಃ | ಲಕ್ಷ್ಮಣ್ |
| ತಂದೆ ಹೆಸರು | ಃ | ಚಿನ್ನಪ್ಪಶೆಟ್ಟಿ |
| ವಯಸ್ಸು | ಃ | 54 |
| ಉದ್ಯೋಗ | ಃ | ವ್ಯಾಪಾರ |
| ವಾಸ | ಃ | ಹೊಸಕೋಟೆ |

**PW - 2, CW - 3**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 11-09-2019**

**ಮುಖ್ಯ ವಿಚಾರಣೆ ಃ ಎಪಿಪಿಯವರಿಂದಃ**

ದಿ.06-11-2014 **ರಂದು ನನ್ನ ಮಗಳ ಮದುವೆ ವಾರ್ಷಿಕೋತ್ಸಕ ಇದ್ದು, ನಾನು, ಚಾಸಾ-**1**, ಮೃತ ಪ್ರಿಯ, ಚಾಸಾ-**3 **ಮತ್ತು** 4 **ರವರು ಚಾಸಾ-**1 **ರವರ ಸ್ನೇಹಿತನ ಫೋರ್ಡ್ ಐಕಾನ್ ಕಾರಿನಲ್ಲಿ ಘಾಟಿ ಸುಬ್ರಮಣ್ಯ ದೇವಸ್ಥಾನಕ್ಕೆ ಹೋಗಿ ಹಿಂತುರಿಗಿ ವಾಪಸ್ ಬರುವಾಗ ಸಂಜೆ** 6.00 **ಸಮಯದಲ್ಲಿ ದೇವನಹಳ್ಳಿ ಸೂಲಿಬಲೆ ರಸ್ತೆಯ ಬಾಲೆಪುರ ಕ್ರಾಸ್ ಬಳಿ ಸೂಲಿಬಲೆ ಕಡೆಯಿಂದ ಇನೋವ ಕಾರು ಅತಿವೇಗವಾಗಿ ಅಡ್ಡದಿಡ್ಡಿಯಾಗಿ ಚಾಲಕ ಚಾಲನೆ ಮಾಡಿಕೊಂಡು ಬಂದು ನಮ್ಮ ಕಾರಿನ ಎಡಭಾಗಕ್ಕೆ ಡಿಕ್ಕಿ ಹೊಡಿದಿರುತ್ತಾನೆ. ಆ ಸಮಯದಲ್ಲಿ ನನ್ನ ಮಗಳಾದ ಮೃತ ಪ್ರಿಯ ಸ್ಥಳದಲ್ಲಿ ಮೃತಪಟ್ಟಿರುತ್ತಾಳೆ. ಚಾಸಾ-**1 **ರವರ ಸೊಂಟ, ಕೈಕಾಲುಗಳಿಗೆ ಗಾಯಗಳಾಗಿರುತ್ತದೆ. ನನಗೂ ಸಹ ಕೈಕಾಲುಗಳಿಗೆ ಗಾಯಗಳಾಗಿರುತ್ತದೆ. ಚಾಸಾ-**2 **ರವರ ಮೊಣಕೈ ಹಾಗೂ ಕೈಗೆ, ಚಾಸಾ-**4 **ರವರ ತಲೆಗೆ ಏಟಾಗಿರುತ್ತದೆ. ನಾನು ರಸ್ತೆಯ ಎಡಭಾಗದಲ್ಲಿ ಚಾಲಯಿಸಿಕೊಂಡು ಹೋಗುತ್ತಿದೆ, ಆರೋಪಿ ನಾವು ಹೋಗುತ್ತಿದ್ದ ಭಾಗದಲ್ಲಿಯೇ ಚಲಾಯಿಸಿಕೊಂಡು ಬಂದು ಡಿಕ್ಕಿ ಹೊಡೆದಿರುತ್ತಾನೆ. ಆ ದಿನ ಇನೋವ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದ ವ್ಯಕ್ತಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ**

**ಗುರುತಿಸಿರುತ್ತಾರೆ. ಈ ಸಂಬಂಧವಾಗಿ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿರುತ್ತಾರೆ.**

**(ಈ ಹಂತದಲ್ಲಿ ಆರೋಪಿ ಪರ ವಕೀಲರು ನ್ಯಾಯಾಲಯದ ಮುಂದೆ ಹಾಜರಿರದ ಕಾರಣ ಆರೋಪಿಯನ್ನು ಪಾಟೀ ಸವಾಲು ಮಾಡಲು ಸೂಚಿಸಲಾಗಿ ಆರೋಪಿ ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)**

**(ಮರು ವಿಚಾರಣೆ ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**